ಶ್ರೀ ಬಾಲಕೃಷ್ಣ ಹೆಚ್.ಸಿ.:– ಕೇಳುತ್ತಿದ್ದೇನೆ. ನೀವು ಕೇವಲ 100 ಮೀಟರ್ ಮಾತ್ರ ಮಾಡಿದ್ದೀರಿ. ಸುಮಾರು 42–43 ಲಕ್ಷ ವೆಚ್ಚದಲ್ಲಿ ಅದನ್ನು ಕ್ಲಿಯರ್ ಮಾಡಿ underground line ಮಾಡಬೇಕು ಎಂದು ಈ ಹಿಂದೆ proposal ಹೋಗಿದೆ. ಆ proposal ಅನ್ನು ನಿಮಗೆ ನಾನು ಕಳುಹಿಸಿಕೊಡುತ್ತೇನೆ. ದಯಮಾಡಿ ಅದನ್ನು ಮಾಡಿ ಕೊಡಿ ಎಂದು ನಿಮ್ಮಲ್ಲಿ ಮನವಿ ಮಾಡುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):– ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆಯಲ್ಲಿದ್ದಂತಹ ಮಾಹಿತಿಯನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಹೇಳುತ್ತಿದ್ದೀರಿ. ಇನ್ನೂ ವಿಚಾರವಿದೆ. ಜನರ safety ಗೋಸ್ಕರ underline cable ಹಾಕಬೇಕು ಎಂಬುದು ತಮ್ಮ ಸಲಹೆ.

ಶ್ರೀ ಬಾಲಕೃಷ್ಣ ಹೆಚ್.ಸಿ.:– ನಾನು ಇಲಾಖೆಯ ಮಾಹಿತಿ ಕೊಡುತ್ತೇನೆ.

ಅಧ್ಯಕ್ಷರು:– ಆಯಿತು, ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್:– ಕೊಡೋಣ. Let us see ಪರವಾಗಿಲ್ಲ. ಖಂಡಿತ ನಿಮ್ಮದು ಏನು ಇದೆ ಅದಕ್ಕೆ ಸಹಾಯ ಮಾಡೋಣ.

ರಸ್ತೆಗಳು ಹಾಳಾಗಿರುವುದು

14(03); ಶ್ರೀ ರಾಜ ವೆಂಕಟಪ್ಪ ನಾಯಕ (ಸುರಪುರ)

ಅ) ಶೋರಾಪುರ ಮತ ಕ್ಷೇತ್ರದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು ತುಂಬಾ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ರಸ್ತೆಗಳು ಹಾಳಾಗಿವೆ (ಕಿ.ಮೀ. ಸಹಿತ ವಿವರ ನೀಡುವುದು);

ಇ) ಹಾಳಾದ ರಸ್ತೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ಯಾವ ರಸ್ತೆಗಳ ನಿರ್ಮಾಣಕ್ಕೆ ಎಷ್ಟು ಹಣ ನೀಡಲಾಗಿದೆ (ರಸ್ತೆವಾರು ಅನುದಾನದ ವಿವರ ನೀಡುವುದು)?

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

ಅ) ಹೌದು.

ಆ)

1) ಹುನಗುಂದ–ಸುರಪೂರ ರಸ್ತೆ ರಾಹೆ–60 ಕಿ.ಮೀ. 118.00 ರಿಂದ 129.00 ರ ವರೆಗೆ,

2) ಮನಗೋಳಿ–ಬಿಜ್ಜಾಳ ರಸ್ತೆ ರಾಹೆ–61 ಕಿ.ಮೀ. 75.50 ರಿಂದ 109.30 ರ ವರೆಗೆ,

3) ಕೊಡೇಕಲ್–ತಾಳಿಕೋಟೆ ರಸ್ತೆ ಕಿ.ಮೀ. 0.00 ರಿಂದ 9.80ರ ವರೆಗೆ,

4) ತಿಂಥಿಣಿ–ಬಲಶೆಟ್ಟಿಹಾಳ ರಸ್ತೆ ಕಿ.ಮೀ. 2.00 ರಿಂದ 9.70 ಮತ್ತು 16.00 ರಿಂದ 18.00 ರ ವರೆಗೆ,

5) ಚೌಡೇಶ್ವರಹಾಳದಿಂದ ಮಲ್ಲಾ–ಪೀರಾಪೂ ರಸ್ತೆ ಜಿಲ್ಲಾ ಮುಖ್ಯ ರಸ್ತೆ ಕಿ.ಮೀ. 23.00 ರಿಂದ 48.00 ರ ವರೆಗೆ,

6) ವಣಕಿಹಾಳದಿಂದ ಮರಕಲ್–ಕೊಳ್ಳೂರ ರಸ್ತೆ ಕಿ.ಮೀ. 0.00 ರಿಂದ 12.00 ರ ವರೆಗೆ ಮತ್ತು

7) ಶ್ರೀರಂಗಪಟ್ಟಣ–ಜೇವರ್ಗಿ ರಸ್ತೆ ರಾಹೆ–19 ಕಿ.ಮೀ. 503.00 ರಿಂದ 535.00 ರ ವರೆಗೆ.

ಇ) ಹಾಳಾದ ಏಳು ರಸ್ತೆಗಳ ಸುಧಾರಣೆ / ನವೀಕರಣ ಕಾಮಗಾರಿಗಳಿಗೆ ಬಿಡುಗಡೆಯಾದ ಅನುದಾನದ ವಿವರಗಳು ಈ ಕೆಳಗಿನಂತಿವೆ:

ಕ್ರ. ಸಂ.	ರಸ್ತೆ ಹೆಸರು	ಅನುದಾನ (₹ ಲಕ್ಷಗಳಲ್ಲಿ)
1	ಹುನಗುಂದ–ಸುರಪೂರ ರಾಹೆ–60 ಕಿ.ಮೀ. 75.50 ರಿಂದ 109.30.	4600.00
2	ಮನಗೊಳಿ–ಬಿಚ್ಚಾಳ ರಾಹೆ–61 ಕಿ.ಮೀ 75.50 ರಿಂದ 84.50 ಮತ್ತು 86.50 ರಿಂದ 101.00 ರವರೆಗೆ ನವೀಕರಣ.	118.41
	ಮನಗೊಳಿ–ಬಿಚ್ಚಾಳ ರಾಹೆ–61 ಕಿ.ಮೀ. 93.00 ರಿಂದ 101.50 ರವರೆಗೆ ಸುಧಾರಣೆ.	52.00
	ಮನಗೊಳಿ–ಬಿಚ್ಚಾಳ ರಾಹೆ–61 ಕಿ.ಮೀ. 75.52 ರಿಂದ 84.50 ರವರೆಗೆ ನವೀಕರಣ.	56.50
	ಮನಗೊಳಿ–ಬಿಚ್ಚಾಳ ರಾಹೆ–61 ಆಯ್ದ ಭಾಗಗಳಲ್ಲಿ ಸುಧಾರಣೆ.	140.00
3	ಕೊಡೇಕಲ್–ತಾಳಿಕೋಟೆ ರಸ್ತೆ ಕಿ.ಮೀ. 0.00 ರಿಂದ 9.80 ರವರೆಗೆ ಸುಧಾರಣೆ	600.00
4	ತಿಂಥಿಣಿ–ಬಲಶೆಟ್ಟಿಹಾಳ ರಸ್ತೆ ಜಿಮುರ ಕಿ.ಮೀ. 2.00 ರಿಂದ 9.70 ಮತ್ತು 16.00 ರಿಂದ 18.00 ರವರೆಗೆ ಸುಧಾರಣೆ.	600.00
5	ಚೌಡೇಶ್ವರಹಾಳ–ಮಲ್ಲಾ–ಪೀರಾಪೂರ ರಸ್ತೆ ಜಿಮುರ ಕಿ.ಮೀ. 23.00 ರಿಂದ 48.00 ರವರೆಗೆ ಸುಧಾರಣೆ.	1000.00
6	ವಣಕಿಹಾಳ ದಿಂದ ಮರಕಲ್–ಕೊಳ್ಳೂರ ರಸ್ತೆ ಜಿಮುರ ಕಿ.ಮೀ 0.00 ರಿಂದ 12.00 ರವರೆಗೆ ಸುಧಾರಣೆ.	316.00
	ಒಟ್ಟು	**7482.91**
7	ಶ್ರೀರಂಗಪಟ್ಟಣ–ಜೇವರ್ಗಿ ರಾಹೆ–19 ಕಿ.ಮೀ. 503.00 ರಿಂದ 535.00 ರವರೆಗೆ ಸುಧಾರಣೆ.	2389.00
	ಒಟ್ಟು	**9871.91**

ಶ್ರೀ ರಾಜ ವೆಂಕಟಪ್ಪ ನಾಯಕ (ಸುರಪುರ):– ಮಾನ್ಯ ಅಧ್ಯಕ್ಷರೆ, ಸುಮಾರು 7 ರಸ್ತೆಗಳ ಕಾಮಗಾರಿ ನಡೆಯುತ್ತಿದೆ. ಆದರೆ, ಎರಡನೇ item ಏನಿದೆ, ಮನಗೋಳಿ–ಬಿಚ್ಚಾಳ ರಸ್ತೆ ಏನಿದೆ ಅದು ನನ್ನ ಕ್ಷೇತ್ರದಲ್ಲಿ ಸುಮಾರು 25 ಕಿ.ಮೀ. ಮಾಡಬೇಕಾಗಿದೆ. ಕೆ–ಶಿಪ್‌ಗೆ ತಾವು ಟೆಂಡರ್ ಕೊಟ್ಟು ಸುಮಾರು ನಾಲ್ಕು ವರ್ಷಗಳಾಯಿತು. ನಾಲ್ಕು ವರ್ಷಗಳಾದರೂ ಇಲ್ಲಿಯವರೆಗೆ ಇನ್ನೂ ಚಾಲೂ ಆಗಿಲ್ಲ. ದಯಮಾಡಿ ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):– ಮಾನ್ಯ ಅಧ್ಯಕ್ಷರೆ, ಇದುವರೆವಿಗೂ ಸರ್ಕಾರದ ವತಿಯಿಂದ ಎಲ್ಲಾ ರಸ್ತೆಗಳ ಕಾಮಗಾರಿಗೂ ಹಣ ಬಿಡುಗಡೆ ಮಾಡಿದ್ದೇನೆ. ಕೆಲಸ ಮಾಡುವುದಕ್ಕೆ ಸೂಚನೆ ಕೊಡುತ್ತೇನೆ.

(ಗೊಂದಲ)

ಶ್ರೀ ರಾಜ ವೆಂಕಟಪ್ಪ ನಾಯಕ:– ಸರ್, ಒಂದು ನಿಮಿಷ.

ಅಧ್ಯಕ್ಷರು:– ಬೇಗ ಬೇಗ ಕೇಳಿ.

ಶ್ರೀ ರಾಜ ವೆಂಕಟಪ್ಪ ನಾಯಕ:– ಅದು ಟೆಂಡರ್ ಆಗಿ ನಾಲ್ಕು ವರ್ಷಗಳು ಕಳೆದಿವೆ. 400 ಕೋಟಿ ರೂಪಾಯಿಗಳಿಗೆ ಟೆಂಡರ್ ಆಗಿ ನಾಲ್ಕು ವರ್ಷಗಳಾಯಿತು. ಕೆ–ಶಿಪ್ ಏಜೆನ್ಸಿಗೆ entrust ಆಗಿದೆ.

ಅಧ್ಯಕ್ಷರು:– ಕೆ–ಶಿಪ್‌ಗೆ ಕೊಟ್ಟು ನಾಲ್ಕು ವರ್ಷಗಳಾಗಿವೆ. ಅಷ್ಟೆ ಕೇಳಿ.

ಶ್ರೀ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ತಾವು ಇಲ್ಲಿ specific ಆಗಿ ಕೇಳಿಲ್ಲ. Detail ವರದಿ ತರಿಸಿಕೊಂಡು ಅವರಿಗೆ ನಾವು ಉತ್ತರ ಒದಗಿಸಿಕೊಡುತ್ತೇವೆ.